# ಅಂಗನೆಯರೆಲ್ಲ ನೆರೆದು

1. **Ref.:** Shri Purandara Dasara Sahitya Part – 4, Krishna Leele, edited by Shri Betageri Krishna Sharma and Shri Bengeri Huchhu Rayaru, page No. 18
2. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 9
3. **Ref.:** Purandara Sahitya Darshana, Samputa 4, Keerthana Darshana edited by Prof. S.K. Ramachandra Rao, page No. 47
4. **Note:** Lyrics given without highlights are as per Ref. 2 and the wordings given in Ref. 1 are given in yellow highlights as they are slightly different. Lyrics in Ref. 3 are similar to Ref. 2.
5. **Note:** Singer has followed lyrics as in Ref. 2.

| | |
|---|---|
| ರಾಗ: ಕಾಂಬೋಧಿ ತಾಳ: ಆದಿ | ರಾಗ: ಕಾಂಬೋಧಿ ತಾಳ: ಆದಿ |
| | |
| ಅಂಗನೆಯರೆಲ್ಲ ನೆರೆದು ಚಪ್ಪಾಳಿಕ್ಕುತ ದಿವ್ಯ | ಅಂಗನೆಯರೆಲ್ಲ ನೆರೆದು ಚಪ್ಪಾಳೆಯಿಕ್ಕುತ ದಿವ್ಯ |
| ಮಂಗಳ ನಾಮವ ಪಾಡಿ ರಂಗನ ಕುಣಿಸುವರು ॥ ಪ ॥ | ಮಂಗಳ ನಾಮವ ಪಾಡಿ ರಂಗನ ಕುಣಿಸುವರು |
| | |
| ಪಾಡಿ ಮಲ್ಹಾರಿ ಭೈರವಿ ಸಾರಂಗ ದೇಶಿ | ಪಾಡಿ ಮಲಹರಿ ಭೈರವಿ ಸಾರಂಗ ದೇಶಿ |
| ಗುಂಡಕ್ರಿಯ ಗುಜ್ಜರಿ ಕಲ್ಯಾಣಿ ರಾಗದಿ | ಗುಂಡಕ್ರಿ ಗುಜ್ಜರಿ ಕಲ್ಯಾಣಿ ರಾಗದಿ |
| ತಂಡ ತಂಡದಲಿ ನೆರೆದು ರಂಗನ ಉಡಿಯ ಘಂಟೆ | ತಂಡ ತಂಡದಿ ನೆರೆದು ರಂಗನ ಉಡಿಗಂಟೆ |
| ಘಣ್ ಘಣ್ ಘಣ್ ಘಣಿರೆಂದು ಹಿಡಿದು ಕುಣಿಸುವರು ॥ 1 ॥ | ಢಣ್ ಢಣ ಢಣಿರೆಂದು ಹಿಡಿದು ಕುಣಿಸುವರು |
| | |
| ತಿತ್ತಿರಿ ಮೌರಿ ತಾಳ ದಂಡಿಗೆ ಮದ್ದಲೆ | ತುತ್ತೂರಿ ಮೌರಿ ತಾಳ ದಂಡಿಗೆ ಮದ್ದಲೆ |
| ಉತ್ತಮದ ಶಂಖ ಶಬ್ದ ನಾದಗಳಿಂದ | ಉತ್ತಮದ ಶಂಖದ ನಾದಗಳಿಂದ |
| ಸುತ್ತ ಮುತ್ತ ನಾರಿಯರ ತಥೈ ತಥೈ ಥಾಯೆಂದು | ಸುತ್ತ ಮುತ್ತ ನಾರಿಯರು ತಾಥೈಯೆಂದು |
| ಅರ್ತಿಯಿಂದ ಕುಣಿಸುವರು ಪರವಸ್ತುವ ಹಿಡಿದು ॥ 2 ॥ | ಅರ್ತಿಯಿಂದ ಕುಣಿಸುವರು ಪರವಸ್ತು ತಥೈ ಹಿಡಿದು |
| | |
| ಕಾಮಿನಿಯರೆಲ್ಲ ನೆರೆದು ಕಂದನೊಡನಾಡಿ | ಕಾಮಿನಿಯರೆಲ್ಲ ನೆರೆದು ಕಂದನೊಡನಾಟಗಳನಾಡಿ |
| ಪ್ರೇಮದಿಂದ ಬಿಗಿ ಬಿಗಿದಪ್ಪಿ ಮುದ್ದಾಡಿ | ಪ್ರೇಮದಿಂದ ಬಿಗಿ ಬಿಗಿದಪ್ಪಿ ಮುದ್ದಾಡಿ |
| ಕಾಮಿತ ಫಲವೀವ ಭಕುತ ಜನರೊಡೆಯ | ಕಾಮಿತ ಫಲವೀವ ಭಕುತ ಜನರೊಡೆಯ |
| ಸ್ವಾಮಿ ಪುರಂದರ ವಿಠ್ಠಲ ರಾಯನ ॥ 3 ॥ | ಸ್ವಾಮಿ ಶ್ರೀ ಪುರಂದರ ವಿಠ್ಠಲ ರಾಯನ್ನ |

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

ಗೋಕುಲದ ಹೆಣ್ಣು ಮಕ್ಕಳು ಒಂದೆಡೆಯಲ್ಲಿ ಸೇರಿ ಚಪ್ಪಾಳೆ ಇಕ್ಕುತ ಬಾಲ ಕೃಷ್ಣನನ್ನು ಆಡಿಸಿದ ವಿಷಯವು ಈ ಹಾಡಿನಲ್ಲಿದೆ.

**ಉಡಿಗೆಜ್ಜೆ** = ಗೆಜ್ಜೆಯ ಉಡಿದಾರ

**ಮೌರಿ** = ಬಜಂತ್ರಿ, ಸನಾದಿ

**ದಂಡಿಗೆ** = ತಂಬೂರಿ

**ಅರ್ಥಿಯಿಂದ** – ಪ್ರೀತಿಯಿಂದ.

**ಪರವಸ್ತುವ** – ಪರಮಾತ್ಮನನ್ನು.

**Classification:** Keerthane
**Ankita:** Purandara Vittala
**Location:** NA
**Category:** Krishna Leele
**Sub-Category:** Krishna, gopi, Bhagya, divya, mangala, ranga, shankha, hengasu, prema, phala,
**Pravachana:** NA
**Explanation:** NA